ಓ.ಎಸ್. ನಂ. 40/2022
ಪಿ.ಡಬ್ಲ್ಯೂ- 1

(ಇಂದು ದಿಃ 11-09-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

ಮುಂದುವರೆದ ಮುಖ್ಯ ವಿಚಾರಣೆ :- ಶ್ರೀ ಎನ್ ಆರ್ ವಕೀಲರಿಂದ :-

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯಾಗಿ ಪ್ರತಿಜ್ಞಾ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನ್ನ ತಿಳುವಳಿಕೆಯ ಮೇರೆಗೆ ಬರೆಯಲ್ಪಟ್ಟಿರುತ್ತವೆ ಮತ್ತು ಅವು ಸತ್ಯವಾಗಿರುತ್ತವೆ. ಪ್ರತಿಜ್ಞಾ ಪತ್ರಕ್ಕೆ ಸಹಿ ಮಾಡಿರುತ್ತೇನೆ.

ದಿಃ-31-07-2002 ರ ನೊಂದಾಯಿತ ಕ್ರಯ ಪತ್ರದ ದೃಢೀಕೃತ ನಕಲನ್ನು ನಿಪಿ -1 ಎಂದು, ದಿಃ 23-09-2006 ರ ನೊಂದಾಯಿತ ಕ್ರಯ ಪತ್ರದ ದೃಢೀಕೃತ ನಕಲನ್ನು ನಿಪಿ-2 ಎಂದು, ದಿಃ 20-02-2014 ರ ನೊಂದಾಯಿತ ಕ್ರಯ ಪತ್ರದ ದೃಢೀಕೃತ ನಕಲನ್ನು ನಿಪಿ-3 ಎಂದು, ಪುರಸಭೆಯವರು ನೀಡಿದ 2 ಖಾತಾ ಎಸ್ಟ್ರಾಕ್ಟಗಳನ್ನು ನಿಪಿ 4 ಮತ್ತು 5 ಎಂದು, ಅಸಲು ದಾವಾ ನಂ.76/2008 ರರಲ್ಲಿನ ವಾದ ಪತ್ರದ ದೃಢೀಕೃತ ನಕಲನ್ನು ನಿಪಿ 6 ಎಂದು, ಸದರಿ ದಾವೆಯಲ್ಲಿ ಚೆನ್ನಮ್ಮರವರು ನೀಡಿದ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ದೃಢೀಕೃತ ನಕಲನ್ನು ನಿಪಿ 7 ಎಂದು, ಸದರಿ ದಾವೆಯಲ್ಲಿನ ಪ್ರತಿವಾದ ಪತ್ರದ ದೃಢೀಕೃತ ನಕಲನ್ನು ನಿಪಿ 8 ಎಂದು, ಸದರಿ ದಾವೆಯಲ್ಲಿ ಚೆನ್ನಮ್ಮರವರು ನೀಡಿದ್ದ ಮುಂದುವರೆದ ಮುಖ್ಯ ವಿಚಾರಣೆ ಮತ್ತು ಪಾಟೀ ಸವಾಲಿನ ದೃಢೀಕೃತ ನಕಲನ್ನು ನಿಪಿ 9 ಎಂದು, ಅಸಲು ದಾವಾ ನಂ. 76/2008 ರಲ್ಲಿನ ತೀರ್ಪು ಮತ್ತು ಡಿಕ್ರಿಯನ್ನು ನಿಪಿ10 ಮತ್ತು 11 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಇಲ್ಲ.

**(ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲಿಗೆ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಸೇಡಂ.